**(ಇಂದು ದಿನಾಂಕ 03-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಖ್ಯವಿಚಾರಣೆಃ ವಾದಿ ಪರ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ .

ನಾನು ಈ ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯ ಗುರುತಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು .

ನನ್ನ ಮತ್ತು ಪ್ರತಿವಾದಿಯ ನಡುವೆ ಆಗಿರುವ ಬಿನ್ ಕಬ್ಜಾ ಖರೀದಿ ಕರಾರು ಪತ್ರ ( ನ್ಯಾಯಾಲಯ ಶುಲ್ಕ ಪಾವತಿಸಿದ ಚಲನ ಲಗತ್ತಿಸಿದೆ.) ಹಾಜರುಪಡಿಸಿದ್ದೆನೆ . ಸದರಿ ದಾಖಲೆಯಲ್ಲಿ ನನ್ನ , ಪ್ರತಿವಾದಿ, ಸಾಕ್ಷಿದಾರರ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿ ಗುರುತಿಸಿದ ದಾಖಲೆಯನ್ನು ನಿಪಿ-1 ಎಂದು ಗುರುತಿಸಲಾಯಿತು . ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ-1 (ಎ) ಎಂದು , ಪ್ರತಿವಾದಿಯ 4 ಪುಟಗಳಲ್ಲಿರುವ ಸಹಿಯನ್ನು ಗುರುತಿಸದ ಮೇರೆಗೆ ಅವುಗಳನ್ನು ಒಟ್ಟಾರೆ ನಿಪಿ-1 (ಬಿ) , ಪತ್ರ ಬರೆದವರು ನವಿನ ಹೆಚ್ ಟಿ ಸದರಿಯವರ ಸಹಿಯನ್ನು ಗುರುತಿಸಿದ ಮೇರೆಗೆ ಅದನ್ನು ನಿಪಿ.1(ಸಿ) ಎಂದು, ಸಾಕ್ಷಿದಾರ ಯಲ್ಲಪ್ಪ ಗುಡದರಿ

ಇವರ ಸಹಿಯನ್ನು ನಿಪಿ–1 (ಡಿ) ಎಂದು , ರುದ್ರಪ್ಪ ನಾಯ್ಕು ಇವರ ಸಹಿಯನ್ನು ನಿಪಿ–1 (ಇ) ಎಂದು , ಪರ್ವೇಜ ರವರ ಸಹಿಯನ್ನು ನಿಪಿ.1(ಎಫ) ಎಂದು, ಪ್ರತಿವಾದಿಯ ಹೆಂಡತಿ ಶ್ರೀಮತಿ ಟಿ ಡಿ ಮುಲ್ಲಾ ರವರ ಸಹಿಯನ್ನು ಗುರುತಿಸಿದ ಮೇರೆಗೆ ನಿಪಿ–1 (ಜಿ) ಎಂದು ಗುರುತಿಸಲಾಯಿತು .

| **ಕ್ರಮ ಸಂಖ್ಯೆ** | **ದಾಖಲೆಗಳ ನಮೂನೆ** | **ನಿಶಾನೆ** |
|---|---|---|
| 1 | ಧಾರವಾಡ ತಾಲ್ಲೂಕು ಗರಗ ಹೊಬಳಿ ತೇಗೂರು ಗ್ರಾಮದ ಬ್ಲಾಕ ನಂ: 280/2 ರ ಜಮೀನಿನ ಉತಾರ | ನಿಪಿ–2 |
| 2 | ಪ್ರತಿವಾದಿಗೆ ವಕೀಲರ ಮೂಲಕ ಕೊಟ್ಟ ನೊಟಿಸನ ಕಚೇರಿ ಪ್ರತಿ | ನಿಪಿ–3 |
| 3 | ಅಂಚೆ ರಶೀದಿ | ನಿಪಿ–4 |
| 4 | ಅಂಚೆ ಸ್ವಿಕೃತಿ | ನಿಪಿ–5 |

**ಪಾಟೀಸವಾಲು ಃ ಪ್ರತಿವಾದಿ ಪರ ಶ್ರೀ ಎಸ್ ಎಸ್ ಪಿ ವಕೀಲರಿಂದ**

ಪ್ರತಿವಾದಿ ಪರ ವಕೀಲರ ಕೊರಿಕೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಓ ಎಸ್ ನಂ:361/2024
ಪಿ. ಡಬ್ಲ್ಯೂ-1

**ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.**